ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 672

ಸದಸ್ಯರ ಹೆಸರು : ಶ್ರೀ ಪಿ.ಆರ್. ರಮೇಶ್ (ನಾಮ ನಿರ್ದೇಶನ ಹೊಂದಿದವರು)

ಉತ್ತರಿಸುವ ಸಚಿವರು : ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

ಉತ್ತರಿಸುವ ದಿನಾಂಕ : 17.12.2021

ಕ್ರ.ಸಂ	ಪ್ರಶ್ನೆಗಳು	ಉತ್ತರ
ಅ)	ಬೆಂಗಳೂರು ವ್ಯಾಪ್ತಿಯ ಹಾಪ್ ಕಾಮ್ಸ್ ಸಂಸ್ಥೆಯಡಿಯಲ್ಲಿ ಪ್ರತಿ ತಾಲ್ಲೂಕುಗಳಲ್ಲಿ ಸಂಗ್ರಹಣಾ ಕೇಂದ್ರಗಳನ್ನು ಸ್ಥಾಪಿಸಲಾಗಿದೆಯೇ (ವಿವರ ನೀಡುವುದು)	ಬೆಂಗಳೂರು ವ್ಯಾಪ್ತಿಯ ಹಾಪ್ ಕಾಮ್ಸ್ ಸಂಸ್ಥೆಯಡಿಯಲ್ಲಿ 06 ಸಂಗ್ರಹಣಾ ಕೇಂದ್ರಗಳಿರುತ್ತವೆ. ವಿವರಗಳು ಈ ಕೆಳಕಂಡಂತಿವೆ. 1. ತಿಪ್ಪಸಂದ್ರ (ಮಾಗಡಿ ತಾಲ್ಲೂಕು, ರಾಮನಗರ ಜಿಲ್ಲೆ) 2. ಚನ್ನಪಟ್ಟಣ (ರಾಮನಗರ ಜಿಲ್ಲೆ) 3. ದೊಡ್ಡಬಳ್ಳಾಪುರ (ಬೆಂಗಳೂರು ಗ್ರಾಮಾಂತರ ಜಿಲ್ಲೆ) 4. ಮಾಲೂರು (ಕೋಲಾರ ಜಿಲ್ಲೆ) 5. ಸರ್ಜಾಪುರ (ಬೆಂಗಳೂರು ನಗರ ಜಿಲ್ಲೆ) 6. ಕೋಲಾರ ಪ್ರತಿ ತಾಲ್ಲೂಕುಗಳಲ್ಲಿ ಸಂಗ್ರಹಣಾ ಕೇಂದ್ರಗಳನ್ನು ಸ್ಥಾಪಿಸಿರುವುದಿಲ್ಲ.
ಆ)	ಸದರಿ ಸಂಗ್ರಹಣಾ ಕೇಂದ್ರಗಳಲ್ಲಿ ರೈತರ ವ್ಯವಸಾಯ ಉತ್ಪನ್ನಗಳನ್ನು ಖರೀದಿಸಿ ಸಂಗ್ರಹಣೆ ಮಾಡಲಾಗುತ್ತಿದೆಯೇ (ವಿವರ ನೀಡುವುದು)	ಸದರಿ ಸಂಗ್ರಹಣಾ ಕೇಂದ್ರಗಳಲ್ಲಿ ಸಂಸ್ಥೆಯ ನೊಂದಾಯಿತ ಸದಸ್ಯ ರೈತರುಗಳಿಂದ ವ್ಯವಸಾಯ ಉತ್ಪನ್ನಗಳನ್ನು ಖರೀದಿಸಿ ಸಂಗ್ರಹಣೆ ಮಾಡಲಾಗುತ್ತಿದೆ. ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಿದೆ.
ಇ)	ರೈತರಿಂದ ಖರೀದಿಸಿದ ವ್ಯವಸಾಯ ಉತ್ಪನ್ನಗಳಿಗೆ ಸರ್ಕಾರದಿಂದ ಆಯಾ ದಿನಂಪ್ರತಿ ಪಾವತಿ ವ್ಯವಸ್ಥೆ ಜಾರಿಯಲ್ಲಿದೆಯೇ. ಹಾಗಿದ್ದಲ್ಲಿ, ಹಲವು ಸಂಗ್ರಹಣಾ ಕೇಂದ್ರಗಳಲ್ಲಿ ಸಮರ್ಪಕ ದಿನಂಪ್ರತಿ ಪಾವತಿಯಾಗದೆ ರೈತರು ಕಂಗಾಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ. ಬಂದಿದ್ದಲ್ಲಿ ಸರ್ಕಾರದ ಕ್ರಮವೇನು (ವಿವರ ನೀಡುವುದು)	ರೈತರಿಂದ ಖರೀದಿಸಿದ ಉತ್ಪನ್ನಗಳಿಗೆ ರೂ. 25,000 ಗಳಿಗೆ ಒಳಪಟ್ಟ ಮೊತ್ತವನ್ನು 30 ದಿನದೊಳಗಾಗಿ ಹಾಪ್ ಕಾಮ್ಸ್ ನಿಂದ ಪಾವತಿಸಲಾಗುವುದು ಹಾಗೂ ರೂ. 25,000 ಗಳಿಗೆ ಮೇಲ್ಪಟ್ಟ ಮೊತ್ತವನ್ನು 60 ದಿನಗಳ ಒಳಗಾಗಿ ಪಾವತಿಸಲಾಗುವುದು. ರೈತರಿಂದ ಖರೀದಿಸಿದ ವ್ಯವಸಾಯ ಉತ್ಪನ್ನಗಳಿಗೆ ಸರ್ಕಾರದಿಂದ ಆಯಾ ದಿನಂಪ್ರತಿ ಪಾವತಿ ವ್ಯವಸ್ಥೆ ಜಾರಿಯಲ್ಲಿರುವುದಿಲ್ಲ. ಸಂಗ್ರಹಣಾ ಕೇಂದ್ರಗಳಲ್ಲಿ ಸಮರ್ಪಕ ದಿನಂಪ್ರತಿ ಪಾವತಿಯಾಗದೆ ರೈತರು ಕಂಗಾಲಾಗಿರುವುದು ಗಮನಕ್ಕೆ ಬಂದಿರುವುದಿಲ್ಲ.

<table>
<tr>
<td>ಈ)</td>
<td>ಕಳೆದ 5 ವರ್ಷಗಳಿಂದ ಬೆಂಗಳೂರು ವ್ಯಾಪ್ತಿಯ ಹಾಪ್ ಕಾಮ್ಸ್ ಸಂಸ್ಥೆಗೆ ಸರ್ಕಾರದಿಂದ ಒದಗಿಸಿದ ಅನುದಾನವೆಷ್ಟು? (ವಿವರ ನೀಡುವುದು)</td>
<td>ಕಳೆದ 5 ವರ್ಷಗಳಿಂದ ಬೆಂಗಳೂರು ವ್ಯಾಪ್ತಿಯ ಹಾಪ್ ಕಾಮ್ಸ್ ಸಂಸ್ಥೆಗೆ ಸರ್ಕಾರದಿಂದ 289.50 ಲಕ್ಷಗಳ ಅನುದಾನ ಒದಗಿಸಲಾಗಿದೆ. ವಿವರಗಳು ಈ ಕೆಳಕಂಡಂತಿದೆ.
<table>
<tr><th>ಕ್ರ.ಸಂ</th><th>ವರ್ಷ</th><th>ಒದಗಿಸಿದ ಅನುದಾನ (ರೂ.ಲಕ್ಷಗಳಲ್ಲಿ)</th></tr>
<tr><td>1</td><td>2016-17</td><td>260.50</td></tr>
<tr><td>2</td><td>2017-18</td><td>-</td></tr>
<tr><td>3</td><td>2018-19</td><td>-</td></tr>
<tr><td>4</td><td>2019-20</td><td>-</td></tr>
<tr><td>5</td><td>2020-21</td><td>29.00</td></tr>
<tr><td colspan="2">ಒಟ್ಟು</td><td>289.50</td></tr>
</table>
</td>
</tr>
</table>

HORTI 534 HGM 2021

(ಮುನಿರತ್ನ)
ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ
ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು.

ಅನುಬಂಧ – 1

ಸಂಗ್ರಹಣಾ ಕೇಂದ್ರಗಳಲ್ಲಿ ರೈತರ ವ್ಯವಸಾಯ ಉತ್ಪನ್ನಗಳನ್ನು ಪ್ರತಿ ಮಾಹೆಯಲ್ಲಿ ಖರೀದಿಸಿದ ವಿವರ:

ಮಾಹೆ ಮತ್ತು ವರ್ಷ	ಪರಿಮಾಣ (ಕೆ.ಜಿ. ಗಳಲ್ಲಿ)	ಮೊತ್ತ (ರೂ.ಗಳಲ್ಲಿ)
ಏಪ್ರಿಲ್-2021	60,298	15,23,450.00
ಮೇ-2021	59,657	13,56,309.00
ಜೂನ್-2021	69,391	16,26,020.00
ಜುಲೈ-2021	65,690	16,45,370.00
ಆಗಸ್ಟ್-2021	67,560	18,36,560.00
ಸೆಪ್ಟೆಂಬರ್-2021	66,681	17,18,102.00
ಅಕ್ಟೋಬರ್-2021	64,979	21,42,636.00
ನವೆಂಬರ್-2021	61,417	20,69,695.00
ಒಟ್ಟು	5,15,673	1,18,48,447.00

for ವ್ಯವಸ್ಥಾಪಕ ನಿರ್ದೇಶಕರು